401

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 910(1055)

2. ಸದಸ್ಯರ ಹೆಸರು : ಶ್ರೀ ಶಶೀಲ್. ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

3. ಉತ್ತರಿಸಬೇಕಾದ ದಿನಾಂಕ : 14/12/2023.

4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಲೋಕಸೇವಾ ಆಯೋಗದ (ಕೆ.ಪಿ.ಎಸ್.ಸಿ) ಮೂಲಕ ನಡೆಯುವ ಪರೀಕ್ಷೆಗಳ ಫಲಿತಾಂಶಗಳನ್ನು ಪ್ರಕಟಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿಯೇ: ಬಂದಿದ್ದಲ್ಲಿ, ನೇಮಕಾತಿ ವಿಳಂಬವನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು: | ಬಂದಿದೆ.<br>ವಿಳಂಬವನ್ನು ತಡೆಗಟ್ಟುವ ನಿಟ್ಟಿನಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕರ್ನಾಟಕ ಲೋಕಸೇವಾ ಆಯೋಗದ ಅಧಿಕಾರಿ /ನೌಕರರು ನಿಗದಿತ ಕಛೇರಿ ವೇಳೆಯ ಮುನ್ನ ಮತ್ತು ನಂತರ ಹಾಗೂ ಸಾರ್ವತ್ರಿಕ ರಜಾ ದಿನಗಳಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸು ತ್ತಿರುತ್ತಾರೆ. ಅಲ್ಲದೇ ನೇಮಕಾತಿ ಪ್ರಕ್ರಿಯೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದಿಂದ ಆಯೋಗಕ್ಕೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ. |
| ಆ) | ಕಳೆದ ಒಂದು ವರ್ಷದಲ್ಲಿ ಕೆ.ಪಿ.ಎಸ್.ಸಿ ಮೂಲಕ ಯಾವ ಯಾವ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಗಳನ್ನು ಹೊರಡಿಸಲಾಗಿದೆ: ಯಾವ ಹುದ್ದೆಗಳಿಗೆ ಎಷ್ಟೆಷ್ಟು ಅರ್ಜಿಗಳು ಸ್ವೀಕೃತವಾಗಿವೆ. ಯಾವ ಕಾಲಮಿತಿಯಲ್ಲಿ ಈ ನೇಮಕಾತಿಗಳನ್ನು ಪೂರ್ಣಗೊಳಿಸಲಾಗುವುದು: (ವಿವರ ನೀಡುವುದು) | ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ಕಳೆದ ಒಂದು ವರ್ಷದಲ್ಲಿ ರಾಜ್ಯದ ನಾಗರೀಕ ಸೇವೆಯ ವಿವಿಧ ವೃಂದದ ಹಲವು ಹುದ್ದೆಗಳ ನೇಮಕಾತಿಗಾಗಿ ಹೊರಡಿಸಲಾಗಿರುವ ಅಧಿಸೂಚನೆಗಳು ಹುದ್ದೆವಾರು ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ ಮತ್ತು ಪ್ರಸ್ತುತ ನೇಮಕಾತಿಯ ಹಂತದ ಬಗೆಗಿನ ಮಾಹಿತಿಯನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ.<br>ನೇಮಕಾತಿ ಪ್ರಕ್ರಿಯೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |

| | | |
|---|---|---|
| ಇ) | ಪ್ರತಿ ವರ್ಷ 4-5 ಲಕ್ಷ ಎಸ್. ಎಸ್. ಎಲ್. ಸಿ. ಮತ್ತು ದ್ವಿತಿಯ ಪಿಯು ವಿದ್ಯಾರ್ಥಿಗಳು ಬರೆಯುವ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ಕೇವಲ ಎರಡೇ ತಿಂಗಳಲ್ಲಿ ಮೌಲ್ಯಮಾಪನ ಪೂರ್ಣಗೊಳಿಸಿ ಫಲಿತಾಂಶ ಪ್ರಕಟಿಸುವುದು ಸಾಧ್ಯವಾಗುವುದಾದರೆ, ಕೆ.ಪಿ.ಎಸ್.ಸಿ .ಮೂಲಕ ನಡೆಯುವ ಅದರಲ್ಲೂ, ಬಹು ಆಯ್ಕೆಯ ಪರೀಕ್ಷೆಯ ಸ್ವರೂಪವಿದ್ದರೂ ಮೌಲ್ಯಮಾಪನ ತಡವಾಗಲು ಕಾರಣವೇನು: ಮೌಲ್ಯಮಾಪನದ ವೇಗವನ್ನು ಹೆಚ್ಚಿಸಿ ತ್ವರಿತಗತಿಯಲ್ಲಿ ಫಲಿತಾಂಶಗಳನ್ನು ಪ್ರಕಟಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು) | ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇಲಾಖಾ ಪರೀಕ್ಷೆಯೊಂದಿಗೆ ಹಲವಾರು ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯುತ್ತಿರುತ್ತವೆ. ಸದರಿ ಪರೀಕ್ಷೆಗಳು ಬಹು ಆಯ್ಕೆ ಮಾದರಿಯ ಉತ್ತರ ಪತ್ರಿಕೆಯೊಂದಿಗೆ ವಿವರಣಾತ್ಮಕ ಮಾದರಿಯ ಉತ್ತರ ಪುಸ್ತಿಕೆಯನ್ನು ಸಹ ಒಳಗೊಂಡಿರುತ್ತದೆ.<br>ಸದರಿ ವಿವರಣಾತ್ಮಕ ಮಾದರಿಯ ಉತ್ತರ ಪುಸ್ತಿಕೆಗಳ ಮೌಲ್ಯಮಾಪನ ಕಾರ್ಯಗಳು ವರ್ಷವಿಡೀ ನಡೆಯುತ್ತಿರುತ್ತದೆಯಾದ್ದರಿಂದ ವಿಷಯ ತಜ್ಞರಾದ ಮೌಲ್ಯಮಾಪಕರು ತಮ್ಮ ಶಾಲಾ ಕಾಲೇಜುಗಳ ಕಾರ್ಯನಿರ್ವಹಣೆಯ ಒತ್ತಡದೊಂದಿಗೆ ಸಮಯ ಹೊಂದಾಣಿಕೆ ಮಾಡಿಕೊಂಡು ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಬೇಕಿರುತ್ತದೆ. ಹಾಗಾಗಿ ಹಾಜರಾಗುವ ಸೀಮಿತ ಸಂಖ್ಯೆಯ ಮೌಲ್ಯಮಾಪಕರುಗಳಿಂದಲೇ ಮೌಲ್ಯಮಾಪನ ಪ್ರಕ್ರಿಯೆಯನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ. ಅಲ್ಲದೆ, ಮೌಲ್ಯಮಾಪನದ ವೇಗವನ್ನು ಹೆಚ್ಚಿಸಲು ಡಿಜಿಟಲ್ ಮೌಲ್ಯಮಾಪನ ಪದ್ಧತಿಯನ್ನು ಸಹ ಆಯೋಗದಲ್ಲಿ ಅಳವಡಿಸಿಕೊಳ್ಳಲಾಗಿದೆ.<br><br>ಮುಂದುವರೆದು ಮೌಲ್ಯಮಾಪನ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ನಿಯಮಾನುಸಾರ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ವಿವಿಧ ಹಂತಗಳು ಅಂದರೆ ಆಯೋಗದ ಅನುಮೋದನೆಯೊಂದಿಗೆ ಅರ್ಹತಾ ಪಟ್ಟಿ ಪ್ರಕಟಣೆ, ಮೂಲ ದಾಖಲೆಗಳ ಪರಿಶೀಲನೆ ಹಾಗೂ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಣೆಯನ್ನು ಒಳಗೊಂಡಿರುತ್ತದೆ. ಇದರ ನಡುವೆ ನ್ಯಾಯಾಲಯದ ಪ್ರಕರಣಗಳು ದಾಖಲಾದಲ್ಲಿ ನೇಮಕಾತಿ ಪ್ರಕ್ರಿಯೆಗಳು ಇನ್ನೂ ವಿಳಂಬವಾಗುವ ಸಾಧ್ಯತೆ ಇರುತ್ತದೆ.<br><br>ಆದಾಗ್ಯೂ ಎಲ್ಲಾ ಪರೀಕ್ಷೋತ್ತರ ಕಾರ್ಯಗಳನ್ನು ಆಯೋಗದ ಸೀಮಿತ ಸಿಬ್ಬಂದಿಯಿಂದಲೇ ಶೀಘ್ರವಾಗಿ ಪೂರೈಸಿ ತ್ವರಿತಗತಿಯಲ್ಲಿ ಫಲಿತಾಂಶಗಳನ್ನು ಪ್ರಕಟಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಸಿಆಸುಇ/227/ಎಸ್ಎಲ್ಎ/2023**

**( ಸಿದ್ದರಾಮಯ್ಯ)**
**ಮುಖ್ಯಮಂತ್ರಿ**